**ಸಾಕ್ಷಿಗೆ ದಿನಾಂಕಃ17-12-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ 1 ಬಿ ಪರ ಶ್ರೀ.CSS ವಕೀಲರಿಂದ ::**

ದಾವಾ ಸರ್ವೇ ನಂಬರ್ 49/3 ಪಿ 2 ಎಕರೆ 14 ಗುಂಟೆ ಇರುವುದನ್ನು ತೋರಿಸಲು ನನ್ನ ಬಳಿ ನನ್ನ ತಂದೆಯ ಪರವಾಗಿ ಆಗಿರುವ ಕ್ರಯಪತ್ರ ಇರುತ್ತದೆ. ದಾವಾ ಸರ್ವೇ ನಂಬರ್ 49/3 ಮೂಲ ಸರ್ವೇ ನಂಬರ್ 49 ರ ಪೂರ್ವ ಭಾಗದಲ್ಲಿ ಉತ್ತರ-ದಕ್ಷಿಣವಾಗಿ ಇರುವ ಜಾಗ ಆಗಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 49/3 ಪಿ ಎನ್ನುವ ಪೈಕಿ ಜಮೀನು ಅಸ್ತಿತ್ವದಲ್ಲೇ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 49/3 ಕಂದಾಯ ದಾಖಲೆ ಪ್ರಕಾರ ಒಟ್ಟು ವಿಸ್ತೀರ್ಣ 3 ಎಕರೆ 18 ಗುಂಟೆ ಎಂದರೆ ಸಾಕ್ಷಿಯು 5 ಎಕರೆ 8 ಗುಂಟೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 49/3 ರಲ್ಲಿ ಮೊದಲು 2 ಪೋಡಾಗಿ ಸರ್ವೇ ನಂಬರ್ 49/3 ಮತ್ತು ಸರ್ವೇ ನಂಬರ್ 49/4 ರಂತೆ ಹಿಸ್ಸೆಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಹೂಡುವ ಪೂರ್ವದಲ್ಲಿ ಸರ್ವೇ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಸರ್ವೇ ನಕ್ಷೆ ತೋರಿಸಲಾಗಿ ಅದನ್ನು ನೋಡಿ ದಾವಾ ಸರ್ವೇ ನಂಬರ್ ಸಂಬಂಧಪಟ್ಟ ದಾಖಲೆ ಆಗಿರುತ್ತದೆ ಎಂದು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ರಲ್ಲಿ ಇರುವ ಅಂಶಗಳ ಬಗ್ಗೆ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸರ್ವೇ ನಂಬರ್ 49/3 ರ ದಕ್ಷಿಣ ಭಾಗದಲ್ಲಿ ನನಗೆ ಎಷ್ಟು ವಿಸ್ತೀರ್ಣದ ಜಾಗ ಇರುತ್ತದೆ ಎಂದರೆ ಸಾಕ್ಷಿಯು 2 ಎಕರೆ 14 ಗುಂಟೆ ಇರುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು 2 ಎಕರೆ 14 ಗುಂಟೆ ಜಾಗದಲ್ಲಿ ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 49/3 ಪಿ ರ ಸರ್ವೇ ದಾಖಲಾತಿಗಳಿಗೂ, ಪಹಣಿಗೂ ಹಾಗೂ ದಾವೆಯಲ್ಲಿ ಹೇಳಿರುವ ವಿಚಾರಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2001 ರಲ್ಲಿ ಆದ ಪೋಡಿ ನ ಅನ್ವಯ ಸರ್ವೇ ನಂಬರ್ 49/3 ರ ಹಿಂದಿನ ಮಾಲೀಕರ ಹೆಸರಿನಲ್ಲಿಯೇ ಪಹಣಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ಒಟ್ಟು 3 ಎಕರೆ

18 ಗುಂಟೆ, ಖರಾಬು 2 ಗುಂಟೆ ಹಾಗೂ ಐನು ಸೇರಿ 3 ಎಕರೆ 16 ಗುಂಟೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗದ ಪಹಣಿಯು ಪ್ರಸ್ತುತದಲ್ಲಿ ತಿಮ್ಮಣ್ಣ, ರಂಗಪ್ಪ, ಶಂಕರಮ್ಮ, ಭಾಗ್ಯಮ್ಮ ಮತ್ತು ಇತರರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ಇತ್ತೀಚೆಗೆ ಮೋಸದಿಂದ ಪೌತಿ ಆಧಾರದಲ್ಲಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ರಮೇಶ್ ಎನ್ನುವವರ ಹೆಸರಿಗೆ ಸದರಿ ಜಾಗದ 1 ಎಕರೆ 20 ಗುಂಟೆ ಸಂಬಂಧಪಟ್ಟಂತೆ ಪಹಣಿಯು 2012 ರಲ್ಲೇ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಡಿ1 ರ ಪ್ರಕಾರ ಸದರಿ ಸರ್ವೇ ನಂಬರ್ ಜಾಗದಲ್ಲಿ ಇರುವ ಉತ್ತರ ಭಾಗದ ಜಾಗವು ಸರ್ವೇ ನಂಬರ್ 49/4 ಮತ್ತು 49/7 ಎಂದು ನಂತರದಲ್ಲಿ 2 ಪೋಡಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿಗೆ ನೀಡಿರುವ ಚೆಕ್ಕುಬಂದಿಯಲ್ಲಿ ನನ್ನ ಸ್ವತ್ತಿನ ಪೂರ್ವಕ್ಕೆ ಅತ್ತಿಮೊಗ್ಗೆ ಗ್ರಾಮದ ಗಡಿ ಮತ್ತು ಪಶ್ಚಿಮಕ್ಕೆ 2 ನೇ ಪ್ರತಿವಾದಿಯ 1 ಎಕರೆ 20 ಗುಂಟೆ ಜಮೀನು ಇರುವುದಾಗಿ ಸುಳ್ಳಾಗಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಉತ್ತರಕ್ಕೆ ನಾನು ಹೇಳಿರುವಂತೆ ಚಂದ್ರೇಗೌಡ ರವರ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಚಂದ್ರೇಗೌಡ ರವರ ಜಾಗದ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಅದೇ ರೀತಿ ದಕ್ಷಿಣಕ್ಕೆ ತಿಪ್ಪಗೊಂಡನಹಳ್ಳಿ ಗ್ರಾಮದ ಗಡಿ ಎಂದು ತೋರಿಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಪ್ರತಿವಾದಿಗಳ ಕುಟುಂಬಸ್ಥರು ಸರ್ವೇ ನಂಬರ್ 49/3 ರ ಉತ್ತರಕ್ಕೆ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿಗಳ ಜಾಗಗಳು ಪ್ರಸ್ತುತದಲ್ಲಿ ಸರ್ವೇ ನಂಬರ್ 49/4 ಮತ್ತು 49/7 ಎಂದು ಹಿಸ್ಸೆಗಳಾಗಿರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನಿಗೆ ಸಂಬಂಧಪಟ್ಟಂತೆ ನನಗೆ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಯಾವತ್ತು ಇರುವುದಿಲ್ಲ ಎಂದರೆ ಸರಿಯಲ್ಲ.

ರಂಗಮ್ಮ ಕೋಂ ರಾಮಪ್ಪ ರವರ ಕುಟುಂಬಸ್ಥರಿಂದ ಪ್ರತಿವಾದಿಗಳು 1999-2000 ದಲ್ಲಿ ದಾವಾ ಸರ್ವೇ ನಂಬರ್ 1 ಎಕರೆ 30 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಪ್ರತಿವಾದಿಗಳ ಕುಟುಂಬಸ್ಥರ ಖಾತೆ ಹಾಗೂ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನಿನ ಪೂರ್ವಕ್ಕೆ ಅತ್ತಿಮೊಗ್ಗೆ ಮಲ್ಲೇಶಪ್ಪ, ಸಾಕಪ್ಪ ಮತ್ತು ಕಲ್ಲೇಶಪ್ಪ ರವರ ಜಮೀನು, ಪಶ್ಚಿಮಕ್ಕೆ ರಮೇಶಪ್ಪ ರವರ ಜಮೀನು, ಉತ್ತರಕ್ಕೆ ಸಾಕಮ್ಮ ಮತ್ತು ಕಲ್ಲೇಶಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ ರಮೇಶ

ರವರ ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳ ಕುಟುಂಬಸ್ಥರು ತಪ್ಪಾಗಿ 1 ಎಕರೆ 10 ಗುಂಟೆ ಬದಲು 1 ಎಕರೆ 30 ಗುಂಟೆ ಜಮೀನು ಅನ್ನು ಖರೀದಿ ಮಾಡಿರುತ್ತಾರೆ. ಸದರಿ ಜಮೀನು ಅನ್ನು ಮಾರಾಟ ಮಾಡಿರುವ ವ್ಯಕ್ತಿಗಳು ರಂಗಮ್ಮ ಕೋಂ ರಾಮಪ್ಪ ಮತ್ತು ಅವರ ಕುಟುಂಬಸ್ಥರು ಎಂದರೆ ಸರಿ.

1999-2000 ರಿಂದ ಇಲ್ಲಿಯವರಗೂ ಪ್ರತಿವಾದಿಗಳ ಹೆಸರಿನಲ್ಲಿ ಇರುವ ಕ್ರಯಪತ್ರಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾವೆ ಹೂಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಪ್ರತಿವಾದಿಗಳ ಕುಟುಂಬಸ್ಥರಿಗೆ ಆಗಿರುವ ಖಾತೆಯನ್ನು ನಾನು ಎ ಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇನೆ ಎಂದರೆ ಸರಿ. ಎ ಸಿ ನ್ಯಾಯಾಲಯದ ಪ್ರಕರಣವು ವಜಾ ಆಗಿರುತ್ತದೆ ಎಂದರೆ ಸರಿ.

2001 ರಲ್ಲಿ ಆದ ಸರ್ವೇಯನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ, ಕಾರಣ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ಸರ್ವೇ ದಾಖಲಾತಿಗಳನ್ನು DDLR ರವರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲೂ ಸಹ ಪ್ರತಿವಾದಿಗಳ ಹೆಸರಿನಲ್ಲಿ ಇರುವ ಕ್ರಯಪತ್ರವನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದ ಕಾರಣ ನಾನು ಅದರ ಮಾಲೀಕ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸರ್ವೇ ನಂಬರ್ ನ ಯಾವುದೇ ಜಾಗದಲ್ಲಿ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್ ಜಾಗವು ಅಡಿಕೆ ತೋಟ ಆಗಿರುತ್ತದೆ ಎಂದರೆ ಸಂಪೂರ್ಣವಾಗಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಜಮೀನು ಅಡಿಕೆ ತೋಟ ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳು ಅವರ ಜಾಗದಲ್ಲಿ 2 ಬೋರ್ ಅನ್ನು ತೆಗೆಸಿರುತ್ತಾರೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಕೆಲವು ಜಮೀನುಗಳನ್ನು ಭದ್ರ ಮೇಲ್ದಂಡೆ ಯೋಜನೆಯಡಿ ಸರ್ಕಾರವು ಸ್ವಾಧೀನಕ್ಕೆ ತೆಗೆದುಕೊಂಡಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ಸರ್ಕಾರದಿಂದ ನಮ್ಮ ಗ್ರಾಮದ ಜಾಗಗಳಿಗೆ ಸಂಬಂಧಪಟ್ಟಂತೆ ಮೌಲ್ಯಮಾಪನ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಕೆಲವು ಜಾಗಗಳಿಗೆ ಮಾತ್ರ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. 2015 ನೇ ಸಾಲಿನಲ್ಲಿ ಅತ್ತಿಮೊಗ್ಗೆ ಗ್ರಾಮದ ಖುಷ್ಕಿ ಜಮೀನು ಗಳಿಗೆ ಎಕರೆಗೆ 8-10 ಲಕ್ಷ ಮೌಲ್ಯ ಇತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯಲ್ಲಿ ನಾನು ಆಸ್ತಿಯ ಬೆಲೆಯನ್ನು ದುರುದ್ದೇಶದಿಂದ

ಕಡಿಮೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೇ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**(2 ನೇ ಪ್ರತಿವಾದಿಯ ಪರ ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: